# ಬಸವಣ್ಣನವರ ವಚನಗಳಲ್ಲಿ-ಜಾತಿ ನಿರಾಕರಣೆ

**ಕುಮಾರಯ್ಯ ಡಿ.ಎಸ್.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15580919

## ABSTRACT:

ಹನ್ನೇರಡನೆ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಶರಣ ಸಮಾಜವು ಕುಲ, ಮತ, ಲಿಂಗ, ವರ್ಣ, ವರ್ಗಇವುಗಳಿಂದ ಮುಕ್ತವಾಗಿತ್ತು. ಬಸವಣ್ಣನವರು ಜಾತಿಯ ವಿಷ ಬೀಜವನ್ನು ಕಿತ್ತು ನವ ಸಮಾಜದಲ್ಲಿ ಹೇಗೆ ಬದುಕಬೇಕೆಂದು ಸಾರಿದರು. ಮನುಧರ್ಮದ ಕರ್ಮಸಿದ್ದಾಂತವನ್ನು ಬಸವಣ್ಣನವರು ಅಲ್ಲಗಳೆದು ಕಾಯಕ ಸಿದ್ಧಾಂತವನ್ನು ಕಾರ್ಯಗತಗೊಳಿಸಿದರು. ಬಸವಣ್ಣನವರ ಚಿಂತನೆಗಳಲ್ಲಿ ಜಾತಿ ನಿರಾಕರಣೆಯೂ ಸಹ ಮಹತ್ವವಾದ ಚಿಂತನೆಯಾಗಿದೆ. ಜಾತಿ ನಿರಾಕರಣೆ ವಿಚಾರದಲ್ಲಿ ಎಲ್ಲರಿಗಿಂತ ಹೆಚ್ಚು ಮಾನಸಿಕ ಸಂಘರ್ಷವನ್ನು ಹೊಂದಿದವನು ಬಸವಣ್ಣನವರು, ಇಲ್ಲದಿದ್ದರೆ 'ಉತ್ತಮ ಕುಲದಲ್ಲಿ ಹುಟ್ಟಿದನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ ಎಂದು ಹೇಳುವ ನೋವು ಏಕಿರಬೇಕಿತ್ತು?' ಉತ್ತಮ ಜಾತಿ ಸಂಕೋಲನೆಯಿಂದ ಬಿಡಿಸಿಕೊಂಡು ಹೊರಬರುವುದಕ್ಕಾಗಿ ತಾನು ಹುಟ್ಟಿದ ಜಾತಿಯನ್ನು ನಿರಾಕರಣೆ ಮಾಡುತ್ತಾನೆ. ಜಾತಿ ಎಂಬ ಹೆಮ್ಮರವನ್ನು ಬುಡಸಮೇತ ಕಿತ್ತು ಹಾಕಲು ಅಂತರ್ಜಾತಿ ವಿವಾಹವನ್ನು ಸಹ ಬಸವಣ್ಣನವರು ಮಾಡುತ್ತಾರೆ. ಇದರೊಂದಿಗೆ ನವ ಸಮಾಜದ ಸೃಷ್ಟಿಗೆ ಕಾರಣನಾಗುತ್ತಾನೆ. ಇಂತಹ ಎಲ್ಲಾ ಅಂಶವನ್ನು ಕುರಿತು ಬಸವಣ್ಣನವರ ವಚನಗಳಲ್ಲಿ ಜಾತಿ ನಿರಾಕರಣೆ ಹೇಗೆ ಮೂಡಿ ಬಂದಿದೆ ಎಂದು ಅರಿಯಬಹುದು.

## KEYWORDS:

ವರ್ಗ, ವರ್ಣ, ಜಾತಿ, ಮೌಢ್ಯ, ಪುರೋಹಿತಶಾಹಿ, ಸಾಮಾಜಿಕ ಆಂದೋಲನ.

ಹನ್ನೆರಡನೇ ಶತಮಾನದಲ್ಲಿ ವಚನಕಾರರ ನಾಯಕತ್ವ ವಹಿಸಿದ ಬಸವಣ್ಣನವರು ಜಾತಿ ವ್ಯವಸ್ಥೆಯನ್ನು ಧಿಕ್ಕರಿಸುತ್ತಾ ಬಂದಂತವರು. ವರ್ಗ, ವರ್ಣ, ಜಾತಿ, ಮೌಢ್ಯ ತುಂಬಿದಂತಹ ಕಾಲದಲ್ಲಿ ಬಸವಣ್ಣನವರು ನವ ಸಮಾಜದ ನಿರ್ಮಾಣಕ್ಕೆ ಬುನಾದಿ ಹಾಕಿದವರು. ಜೇಡರ ದಾಸಿಮಯ್ಯನಿಂದ ಹಿಡಿದು ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ್ಮ, ಅಂಬಿಗರ ಚೌಡಯ್ಯ ನೂರಾರು ವಚನಕಾರರು ಜಾತಿ ವ್ಯವಸ್ಥೆ ವಿರುದ್ಧ ತಮ್ಮದೇ ಮಾತುಗಳಲ್ಲಿ ಟೀಕಿಸಿದವರು. ವಚನಕಾರರಲ್ಲಿ ಸಾಮಾಜಿಕ ಚಿಂತನೆಗಳನ್ನು ವ್ಯವಸ್ಥಿತವಾಗಿ ರೂಪಿಸಿದಂತವರು ಮತ್ತು ವಚನಕಾರರ ನಾಯಕತ್ವ ವಹಿಸಿದ ಬಸವಣ್ಣನವರಿಗೆ ಹೆಚ್ಚಿನ ಮಹತ್ವವನ್ನು ಕೊಡಬಹುದಾಗಿದೆ.

ಬಸವಣ್ಣನವರ ಚಿಂತನೆಗಳು ತುಂಬಾ ವಿಸ್ತಾರವಾದಂತವು ಅವರ ವಚನಗಳಲ್ಲಿ ಸಾಮಾಜಿಕ ಚಿಂತನೆಗಳನ್ನು ವಿಶ್ಲೇಷಿಸುವ ದೃಷ್ಟಿಕೋನಗಳು ವಿಶಿಷ್ಟವಾದಂತಹವು. ಬಸವಣ್ಣನವರು ತಮ್ಮದೇ ವಚನಗಳ ಶೈಲಿಯಲ್ಲಿ ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು ವಿವಿಧ ಮಜಲುಗಳ ಮೂಲಕ ವಿಮರ್ಶಿಸುತ್ತಾ ಸಾಮಾಜಿಕ ಆಂದೋಲನವನ್ನು ಮಾಡಿದಂತವರು. ಅಂದಿನ ಕಾಲದಲ್ಲಿ ತಾವೇ ಶ್ರೇಷ್ಠ ಎಂದು ಬೀಗುತ್ತಿದ್ದಂತಹ ಪುರೋಹಿತಶಾಹಿ ವರ್ಗವನ್ನು ಟೀಕಿಸಿದಂತವರು ವೇದ, ಶಾಸ್ತ್ರ, ತರ್ಕ, ಆಗಮ ಮುಂತಾದವುಗಳನ್ನು ತಮ್ಮದೇ ವಚನಗಳಲ್ಲಿ ಖಂಡಿಸಿರುವುದನ್ನು ಕೆಳಗಿನ ವಚನ ನಿದರ್ಶನವಾಗಿದೆ.

**“ವೇದಕ್ಕೆ ಒರೆಯ ಕಟ್ಟುವೆ!**
**ಶಾಸ್ತ್ರಕ್ಕೆ ನಿಗಳವನಿಕ್ಕುವೆ!**
**ತರ್ಕದ ಬೆನ್ನ ಬಾರನೆತ್ತುವೆ**
**ಆಗಮದ ಮೂಗ ಕೊಯ್ವೆ**
**ನೋಡಯ್ಯ ಮಹಾದಾನಿ ಕೂಡಲಸಂಗಮದೇವ**
**ಮಾದಾರ ಚೆನ್ನಯ್ಯನ ಮನೆ ಮಗ ನಾನಯ್ಯ”**

ಇಲ್ಲಿ ಮಾದರ ಚೆನ್ನಯ್ಯನ ಮನೆ ಮಗ ಎನ್ನುವ ಬಸವಣ್ಣನವರ ನಿಲುವು ಎಂತಹದು ಎನ್ನುವ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಪುರೋಹಿತಶಾಹಿತ್ವದ ವಿರೋಧ ಇದ್ದರು ನೇರವಾಗಿ ಹೇಳದೆ ಕೆಳಜಾತಿಯವರನ್ನು ಮೇಲೆತ್ತುವ ಪ್ರಯತ್ನ ಬಸವಣ್ಣನವರಲ್ಲಿ ಕಾಣಬಹುದಾಗಿದೆ. ಸಮ ಸಮಾಜದ ನಿರ್ಮಾಣಕ್ಕೆ ಬಸವಣ್ಣ ಮಾಡಿದ ಪ್ರಯತ್ನವನ್ನು ಈ ವಚನ ವ್ಯಕ್ತಪಡಿಸುತ್ತದೆ. ವೇದ, ಶಾಸ್ತ್ರ, ತರ್ಕ, ಆಗಮಗಳು ಕ್ರಮಾನುಗತವಾಗಿ ಬಂದು ಕೊನೆಯಲ್ಲಿ ಶೂದ್ರ ಸಮುದಾಯ ಮುಖಾಮುಖಿಯಾಗುತ್ತದೆ ಎನ್ನುವಂತದ್ದು. ವೇದ, ಶಾಸ್ತ್ರ, ತರ್ಕ, ಆಗಮಗಳಿಗೆ ಕ್ರಮವಾಗಿ ಒರೆಯ ಕಟ್ಟುವೆ, ನಿಗಳವನಿಕ್ಕುವೆ, ಬೆನ್ನ ಭಾರನೆತ್ತುವೆ, ಮೂಗ ಕೊಯ್ಯುವೆ ಎನ್ನುವ ಪದಗಳು ಶೂದ್ರ ಸಮುದಾಯದ ಭಾವನೆಗಳು ವರ್ಗ ಸಂಘರ್ಷಕ್ಕೆ ಮುನ್ನುಡಿಯಾಗುತ್ತಿವೆ ಎನ್ನುವುದು ಬಸವಣ್ಣನವರ ಸಾಂಕೇತಿಕ ಧ್ವನಿಗಳಾಗಿವೆ. ಕೊನೆಯಲ್ಲಿ ಮಾದರ ಚೆನ್ನಯ್ಯನ ಮನೆ ಮಗ ಎನ್ನುವಲ್ಲಿ ಬಸವಣ್ಣನವರಿಗಿದ್ದ ತಳ ಸಮುದಾಯದ ಅಭಿಮಾನವನ್ನು ಬಿತ್ತರಿಸುತ್ತದೆ.

**“ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ**
**ಕಷ್ಟತನದ ಹೊರೆಯ ಹೊರಿಸದಿರಯ್ಯಾ,**
**ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,**
**ದಾಸಯ್ಯ ಶಿವದಾನವನೆರೆಯ ನೋಡಯ್ಯಾ,**
**ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.**
**ಉನ್ನತ ಮಹಿಮ,**
**ಕೂಡಲಸಂಗಮದೇವಾ, ಶಿವಧೋ ಶಿವಧೋ”**

ಬಸವಣ್ಣನವರು ಜಾತಿ ವ್ಯವಸ್ಥೆಯನ್ನು ಹೇಗೆ ಧಿಕ್ಕರಿಸುತ್ತಾರೆ ಎನ್ನುವುದಕ್ಕೆ ಇದೊಂದು ಉತ್ತಮ ವಚನವಾಗಿದೆ. ತಾನೇ ಶ್ರೇಷ್ಠ ಎಂಬ ಭಾವನೆ ತನ್ನಲ್ಲಿ ಯಾವತ್ತೂ ಬರಬಾರದು. ಹಾಗೆ ಬಂದರೆ ತಾನು ನಿರ್ಮಿಸಬೇಕಾದ ಸಮ ಸಮಾಜದ ಕನಸಿನ ಕೋಟೆ ಛಿದ್ರವಾಗುವುದು. ಅದಕ್ಕಾಗಿ ನನ್ನಲ್ಲಿ ಯಾವತ್ತೂ ಸಹ ನಾನೇ ಶ್ರೇಷ್ಠ ಎಂಬ ಭಾವನೆ ಬರಬಾರದು ಎಂಬ ಕಲ್ಪನೆ ಬಸವಣ್ಣನವರಲ್ಲಿ ಆಂತರಿಕ ಬದಲಾವಣೆಗೆ ಸಾಕ್ಷಿ ಅಂತಿದೆ. ಈ ವಚನದಲ್ಲಿ ಬಸವಣ್ಣನವರು ತಾನು ಹುಟ್ಟಿದ ಕುಲವನ್ನು ಜರಿಯುತ್ತಾರೆ. ಸಮ ಸಮಾಜದ ನಿರ್ಮಾಣಕ್ಕೆ ನಾನು ಜನಿಸಿದ ಕುಲವೇ ಅಡ್ಡಿಯಾಗುತ್ತಿದೆ ಎಂಬ ಕಳವಳ. ತಳ ಸಮುದಾಯದವರನ್ನು ಕೂಡಿಕೊಂಡು ನವ ಸಮಾಜದ ನಿರ್ಮಾಣ ಮಾಡಲು ಆಗುತ್ತಿಲ್ಲ ಎನ್ನುವ ಆತಂಕವನ್ನು ಅಭಿವ್ಯಕ್ತಪಡಿಸುತ್ತಿರುವುದನ್ನು ಕಾಣಬಹುದು. ಉತ್ತಮ ಕುಲದಲ್ಲಿ ಹುಟ್ಟಿದನೆಂಬ ಕಷ್ಟತನದ ಹೊರೆಯ ಹೊರೆಸದಿರಯ್ಯ ಎಂದು ಕೇಳಿಕೊಳ್ಳುವುದು ಕುಲದ ಹಿರಿಮೆಯನ್ನು ಕಳೆದುಕೊಳ್ಳಲು ಬಸವಣ್ಣನವರ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಇಡೀ ಮಾನವ ಸಮಾಜದ ಪ್ರತಿಯೊಬ್ಬ ಮಾನವನಲ್ಲಿ ಸಹ ತಾನೇ ಶ್ರೇಷ್ಠ ಎಂಬ ಕೆಟ್ಟ ಮನಸು ಬಾರದಿರಲಿ ಎಂಬ ಮನೋಭಾವನೆಯಾಗಿದೆ. ತಳ ಸಮುದಾಯದವರನ್ನು ಪ್ರತಿನಿಧಿಸುವ ಡೋಹರ ಕಕ್ಕಯ್ಯ, ದಾಸಿಮಯ್ಯ, ಮಾದರ ಚೆನ್ನಯ್ಯ ಇವರೆಲ್ಲರ ಜೊತೆ ಸಮನ್ವಯತೆ ಕಾಪಾಡುವಂತೆಯಾಗಲಿ ತನಗೆ ತಾನೇ ಶ್ರೇಷ್ಠ ಎಂಬ ಮನೋಕಲ್ಪನೆ ಯಾವತ್ತೂ ಬರಬಾರದು. ಅದರಿಂದ ತನ್ನನ್ನು ಮುಕ್ತಿಗೊಳಿಸು ಎಂದು ಕೂಡಲಸಂಗಮನಲ್ಲಿ ಕೇಳಿಕೊಳ್ಳುವ ಬಸವಣ್ಣನವರ ವ್ಯಕ್ತಿತ್ವ ಶ್ರೇಷ್ಠವೆನಿಸುತ್ತದೆ.

ಶ್ರೇಷ್ಠ ಕುಲದಲ್ಲಿ ಹುಟ್ಟಿದ್ದೇನೆ ಎನ್ನುವ ಕಾಲದಲ್ಲಿ ಬಸವಣ್ಣನವರು ತಳ ಸಮುದಾಯದವರ ಜೊತೆ ತನ್ನ ಇಡೀ ಜೀವನ ಸಾಗಿಸುವುದಕ್ಕೆ ಪಣತೊಟ್ಟಿದ್ದು. ಅದರಂತೆ ಹನ್ನೆರಡನೇ ಶತಮಾನದಲ್ಲಿನ ಸಮಾಜವನ್ನು ಜಾತಿ ರಹಿತ ಸಮಾಜ ನಿರ್ಮಿಸಲು ತಳ ಸಮುದಾಯದವರೊಂದಿಗೆ ತನ್ನ ಸಂಬಂಧವನ್ನು ಹೇಗೆ ನಿರ್ಮಿಸಿಕೊಂಡಿದ್ದರು ಎಂಬುದಕ್ಕೆ ಇಲ್ಲಿನ ವಚನ ಸಾಕ್ಷಿಯಾಗುತ್ತದೆ. ಉದಾಹರಣೆಗೆ

**"ಅಪ್ಪನು ನಮ್ಮ ಮಾದಾರ ಚೆನ್ನಯ್ಯ,**
**ಬೊಪ್ಪನು ನಮ್ಮ ಡೋಹರ ಕಕ್ಕಯ್ಯ,**
**ಚಿಕ್ಕಯ್ಯನೆಮ್ಮಯ ಕಾಣಯ್ಯ,**
**ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ,**
**ಎನ್ನನ್ನೇತಕ್ಕರಿಯಿರಿ? ಕೂಡಲಸಂಗಯ್ಯಾ."**

ಇಲ್ಲಿ ಬಸವಣ್ಣನವರು ಸಮಾಜದಿಂದ ಹೊರದೂಡಲ್ಪಟ್ಟ ಶೂದ್ರ ಸಮುದಾಯದವರಲ್ಲಿ ಬದುಕುವ ಆತ್ಮವಿಶ್ವಾಸ ತುಂಬುತ್ತಾರೆ. ಶೂದ್ರ

ಸಮುದಾಯದವರೆನಿಸಿದ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಚಿಕ್ಕಯ್ಯ, ಕಿನ್ನರಿ ಬೊಮ್ಮಯ್ಯ ತನ್ನ ಕುಟುಂಬಕ್ಕೆ ಸೇರಿದವರು. ತಾನು ಎಂದೂ ಸಹ ಮೇಲು ಕೀಳು ಎಂದು ಭಾವಿಸುವುದಿಲ್ಲ. ಈ ಸಮಾಜದಲ್ಲಿನ ಮಾನವರು ತಾವೇ ಶ್ರೇಷ್ಠ ಉಳಿದವರು ಕನಿಷ್ಠ ಎಂಬ ಭಾವನೆಯಿಂದ ಹೊರಬರಲಿ, ಇಲ್ಲಿ ಮೇಲು ಕೇಳು ಎಂಬುದಿಲ್ಲ ಮಾನವ ಕುಲವೊಂದೇ ಶ್ರೇಷ್ಠ ಎನ್ನುವ ಪರಿಕಲ್ಪನೆಯನ್ನು ನೀಡಿದಂತವರು. ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಬ್ರಾಹ್ಮಣ್ಯವನ್ನೇ ಧಿಕ್ಕರಿಸಿದ ಬಸವಣ್ಣನವರು ಈ ಸಮಾಜವು ಒಂದು ಕುಟುಂಬದ ಪರಿಕಲ್ಪನೆಯಲ್ಲಿ ಬಾಳಲಿ ಎಂಬ ವಿಶ್ವಮಾನವ ಪ್ರಜ್ಞೆಯನ್ನು ಮೂಡಿಸಿದ ಮಹಾಚೇತನವಾಗಿದ್ದಾರೆ. ಇಲ್ಲಿ ಜಾತಿ, ಕುಲ ಶ್ರೇಷ್ಠವಲ್ಲ ಮನುಷ್ಯ ಕುಲ ಶ್ರೇಷ್ಠ ಎಂಬ ಮನೋಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಪಂಪ ಹೇಳಿದ "ಮನುಷ್ಯ ಕುಲಂ ತಾನೊಂದೇ ವಲಂ" ಎಂಬ ಹೇಳಿಕೆಯನ್ನು ಬಸವಣ್ಣನವರು ಮುಂದುವರಿಸಿದ್ದಾರೆ.

ಜಾತಿಯೆಂಬ ನೆರಳಿನಲ್ಲಿ ಬದುಕುತ್ತಿರುವ ಸಮಾಜಕ್ಕೆ ಬಸವಣ್ಣನವರ ವಿಡಂಬನೆ, ಕುಲ ಮದವನ್ನು ತೋರಿಸಿದರೆ ತಾನು ಹೇಗೆ ಕನಿಷ್ಠನಾಗುತ್ತೇನೆ ಎಂಬುದನ್ನು ಬಸವಣ್ಣನವರ ಮುಂದಿನ ವಚನ ತಿಳಿಸಿಕೊಡುತ್ತದೆ.

**"ಸೆಡೆಯೆಂಬನೆ ಸಿರಿಯಾಳನ?**
**ಮಡಿವಾಳನೆಂಬನೆ ಮಾಚಯ್ಯನ?**
**ಡೋಹರನೆಂಬನೆ ಕಕ್ಕಯ್ಯನ?**
**ಮಾದರನೆಂಬೆನೆ ಚೆನ್ನಯ್ಯನ?**
**ಆನು ಹಾರುವನೆಂದಡೆ**
**ಕೂಡಲಸಂಗಯ್ಯ ನಗುವನಯ್ಯಾ."**

ಈ ವಚನದಲ್ಲಿ ಬ್ರಾಹ್ಮಣ್ಯದ ನೇರ ನಿರಾಕರಣೆಯಾಗಿದೆ. ಬಸವಣ್ಣನವರು ಬ್ರಾಹ್ಮಣ ಕುಲದಿಂದ ಹೊರಬಂದು ಸಾಮಾಜಿಕ ಆಂದೋಲನ ಮಾಡಿದಂತವರು. ಬ್ರಾಹ್ಮಣ ಸಮುದಾಯವು ಸಮಾಜದಲ್ಲಿ ತಾನೇ ಶ್ರೇಷ್ಠ ಎಂದು ಬಿಂಬಿಸುತ್ತಾ ಮಾನವ ಸಮಾಜದಲ್ಲಿ ಮೇಲು-ಕೀಳು ಎಂಬ ಭಾವನೆಗಳನ್ನು ಬಿತ್ತರಿಸಿ ಶೂದ್ರರನ್ನು ಸಮಾಜದಿಂದ ಹೊರಗಟ್ಟಿದ ಕಾಲದಲ್ಲಿ ಬಸವಣ್ಣನವರು ಪುರೋಹಿತಶಾಹಿ ವಿರುದ್ಧ ಮಾಡಿದ ಕ್ರಾಂತಿ ಮಹತ್ವದಾಗಿದೆ. ಭಕ್ತ ಸಿರಿಯಾಳನನ್ನು, ಮಾಚಯ್ಯನನ್ನು, ಕಕ್ಕಯ್ಯನನ್ನು, ಚೆನ್ನಯ್ಯನನ್ನು ಜಾತಿಯ ಹೆಸರಿನಲ್ಲಿ ಗುರುತಿಸಿ ತಾನು ಶ್ರೇಷ್ಠ ಜಾತಿಯವನು ಎಂದು ಕರೆದರೆ ನಾನು ಮಾಡುವಂತಹ ಸಮ ಸಮಾಜದ ನಿರ್ಮಾಣ ಸಾಧ್ಯವಿಲ್ಲ. ಜಾತಿ ವ್ಯವಸ್ಥೆ ಅಡಿಯಲ್ಲಿ ಶರಣರನ್ನು ಗುರುತಿಸುವುದು ಬಿಡಬೇಕು ಎಂಬ ಆಲೋಚನೆಯೂ ಬಸವಣ್ಣನವರದ್ದು. ಹನ್ನೆರಡನೆ ಶತಮಾನದಲ್ಲಿದ್ದ ಜಾತಿ ವ್ಯವಸ್ಥೆಯನ್ನು ಕಿತ್ತೆಸೆಯಲು ಬಸವಣ್ಣ ಮಾಡಿದ ಪ್ರಯತ್ನ ಪ್ರಮುಖವಾಗುತ್ತದೆ. ವೈದಿಕ ಶಾಹಿ ಪದ್ಧತಿ ಶ್ರೇಷ್ಠ ಎಂದು ಕರೆಸಿಕೊಳ್ಳುವ ಕಾಲದಲ್ಲಿ ಶೂದ್ರ ಸಮುದಾಯಗಳು ಸಹ ಶ್ರೇಷ್ಠವಾದಂತವು. ಮನುಷ್ಯ ಸಂಬಂಧದ ಎದುರು ಈ ಜಾತಿ ವ್ಯವಸ್ಥೆ ಕನಿಷ್ಠ

ವಾಗುತ್ತದೆ. ಜಾತಿಯ ಹಿರಿಮೆಯನ್ನು ಬಿಟ್ಟು ಮಾನವೀಯ ನೆಲೆಯಲ್ಲಿ ಜೀವಿಸಬೇಕು ಎಂದು ಸಾರುತ್ತಾರೆ.

**"ಜಾತಿವಿಡಿದು ಸೂತಕವನರಸುವೆ,**
**ಜ್ಯೋತಿವಿಡಿದು ಕತ್ತಲೆಯ ನರಸುವೆ!**
**ಇದೇಕೋ ಮರುಳು ಮಾನವಾ,**
**ಜಾತಿಯಲ್ಲಿ ಅಧಿಕನೆಂಬೆ!**
**ವಿಪ್ರ ಶತಕೋಟಿಗಳಲ್ಲಿದ್ದ ಫಲವೇನೊ**
**'ಭಕ್ತನೇ ಶಿಖಾಮಣಿ' ಎಂಬುದು ವಚನ.**
**ನಮ್ಮ ಕೂಡಲಸಂಗನ ಶರಣರ ಪಾದಪರುಷವ ನಂಬು,**
**ಕೆಡಬೇಡ ಮಾನವಾ"**

ಜಾತಿಯ ಅಸ್ತ್ರವನ್ನು ಹಿಡಿದುಕೊಂಡು ಶ್ರೇಷ್ಠ ಎಂದು ಸಾಧಿಸುತ್ತಿದ್ದ ಅಂದಿನ ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ನಿರಾಕರಿಸಿ ಮನುಷ್ಯ ಸಂಬಂಧವನ್ನು ಬೆಸೆಯಲು ಹೊರಟಂತಹವರು ಬಸವಣ್ಣನವರು. ಧರ್ಮದ ಸಂಕೇತವಾಗಿ ಹುಟ್ಟಿಕೊಂಡ ಜಾತಿಯನ್ನು ಧರ್ಮದ ಮೂಲಕವೇ ನಾಶಗೊಳಿಸಿ, ಧರ್ಮವನ್ನು ಕೇವಲ ಮಾನವನ ನೈತಿಕತೆಗೆ ಅಷ್ಟೇ ಸೀಮಿತಗೊಳಿಸಿದರು. ಲಿಂಗದೀಕ್ಷೆ ಪಡೆದವರೆಲ್ಲಾ ಸಮಾನರು ಇಲ್ಲಿ ಯಾವುದೇ ಜಾತಿ, ಮತ ಭೇದವಿಲ್ಲ ಎಲ್ಲರೂ ಸಮಾನರು ಎಂಬ ಆದರ್ಶವನ್ನು ತೋರಿಸಿಕೊಟ್ಟಂತವರು ಬಸವಣ್ಣನವರು. ಇದು ಕೇವಲ ತೋರ್ಪಡಿಕೆಯಾಗದೆ ಆಚರಣೆ ರೂಪಕ್ಕೂ ಬಂದಿದ್ದು ಇದು ದೊಡ್ಡ ಕ್ರಾಂತಿಯಂತೆ ಹೆಸರು ಪಡೆಯಿತು. ಅಸ್ಪೃಶ್ಯರು ಎಂದರೆ ಮುಟ್ಟಿಸಿಕೊಳ್ಳಬಾರದು ಅದು ಸೂತಕ ಎಂಬ ಕಲ್ಪನೆ ಇದ್ದಂತಹ ಕಾಲದಲ್ಲಿ ಬಸವಣ್ಣನವರು ಅಸ್ಪೃಶ್ಯರ ಜೊತೆಗೆ ಇದ್ದುಕೊಂಡು ಜಾತಿ ವಿನಾಶ ಕಾರ್ಯದಲ್ಲಿ ತೊಡಗಿಕೊಂಡಿದ್ದು ಜ್ಯೋತಿ ಹಿಡಿದು ಕತ್ತಲೆಯನ್ನು ಅಡಗಿಸಿದಂತಾಯಿತು. ಅಸ್ಪೃಶ್ಯರನ್ನು ಸಹ ತನ್ನ ಅನುಭವ ಮಂಟಪದಲ್ಲಿ ಮುಕ್ತ ಚರ್ಚೆಯಲ್ಲಿ ಭಾಗವಹಿಸುವಂತೆ ಮಾಡುವುದು ಧ್ವನಿ ಇಲ್ಲದವರಿಗೆ ಧ್ವನಿ ನೀಡಿದವರು ಬಸವಣ್ಣನವರು.

ಹನ್ನೆರಡನೇ ಶತಮಾನದಲ್ಲಿ ಜಾತಿಯ ಹೆಸರಿನಲ್ಲಿ ಪಟ್ಟ ಭದ್ರ ಹಿತಾಸಕ್ತಿಗಳು ತಮ್ಮ ಅಧಿಕಾರ ದರ್ಪವನ್ನು ತೋರಿಸುತ್ತಿರುವ ಸಂದರ್ಭದಲ್ಲಿ ಬಸವಣ್ಣನವರು ಜಾತಿಯ ಹೆಮ್ಮರವನ್ನು ಬೇರು ಸಮೇತ ಕಿತ್ತೆಸೆಯಲು ಪ್ರಯತ್ನ ಮಾಡಿದಂತವರು. ಅವರ ವಚನಗಳಲ್ಲಿ ಪುರೋಹಿತಶಾಹಿ ವ್ಯವಸ್ಥೆಯ ದರ್ಪವನ್ನು ಕಡೆಗಣಿಸಿದಂತವರು. ಅನುಭವ ಮಂಟಪದ ಮುಖಾಂತರ ನವ ಸಮಾಜದ ನಿರ್ಮಾಣಕ್ಕೆ ರೂಪಕೊಟ್ಟಂತಹವರು ಅಂತರ್ಜಾತಿ ವಿವಾಹ, ಶೂದ್ರರ ಮನೆಯ ಆಹಾರ ಸೇವನೆ, ಮೇಲ್ಜಾತಿ ಕೆಳಜಾತಿಯೊಂದಿಗಿನ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸಲು ಬಸವಣ್ಣನವರು ಮಾಡಿದ ಪ್ರಯತ್ನಗಳು ಹನ್ನೆರಡನೇ ಶತಮಾನದಲ್ಲಿ ಮಾಡಿದ

ಬಹುದೊಡ್ಡ ಕ್ರಾಂತಿಯಾಗಿದೆ. ಈ ಕ್ರಾಂತಿ ಕರ್ನಾಟಕದ ಇತಿಹಾಸದಲ್ಲಿ ಸ್ಥಿರಸ್ಥಾಯಿಯಾಗಿ ಇಂದಿಗೂ ಮಾದರಿಯಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಬಸವರಾಜು ಎಲ್., (2012), ಬಸವಣ್ಣನವರ ವಚನಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ವೀರಣ್ಣ ರಾಜೂರ, (2021), ಬಸವಣ್ಣನವರ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಗಿರಿಜಾಪತಿ ಎನ್.ಎಂ., (2019), ವಚನ ರತ್ನತ್ರಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.